ಏನು ಎಂಬುದೂ ತಿಳಿದಿದೆ. 'ಪರಿಹಾರವು ನಿಮ್ಮ ಕೈಯಳತೆಯಲ್ಲಿಯೇ ಇದೆ' ಎಂದು ವಿಶ್ವಸಂಸ್ಥೆ ಹೇಳಿದೆ. ಆದರೆ ಅದನ್ನು ಗಂಭೀರವಾಗಿ ಪರಿಗಣಿಸಿ ಅನುಸರಿಸುವವರು ಎಷ್ಟು ಜನರಿದ್ದಾರೆ? 'ಎಲ್ಲರೂ ನಿರ್ವಹಿಸಬೇಕಾದ ಕೆಲಸ ಕೊನೆಗೆ ಯಾರ ಕೆಲಸವೂ ಆಗಿರುವುದಿಲ್ಲ' ಎಂಬ ವ್ಯಂಗ್ಯೋಕ್ತಿಯೊಂದು ಚಾಲ್ತಿಯಲ್ಲಿದೆಯಲ್ಲ!

### ಇಣುಕುತ್ತಿದೆ ಆಹಾರದ ಅಭದ್ರತೆ

2023ರ ಜುಲೈನಲ್ಲಷ್ಟೇ ಬಾಸ್ಮತಿ ಅಕ್ಕಿಯ ಹೊರತಾಗಿ ಇತರ ಅಕ್ಕಿಯ ರಫ್ತನ್ನು ಭಾರತ ನಿಷೇಧಿಸಿದೆ. ದೇಶದಲ್ಲಿ ಅಕ್ಕಿಯ ಬೆಲೆ ಏರುತ್ತಿರುವುದನ್ನು ತಡೆಗಟ್ಟಲು ಮತ್ತು ಆಹಾರ ಭದ್ರತೆಯನ್ನು ಕಾಪಾಡಿಕೊಳ್ಳಲು ಈ ನಿಷೇಧ ಹೇರಲಾಗಿದ್ದು, ಜಾಗತಿಕವಾಗಿ ಆಹಾರದ ಅಭಾವ ಉಂಟಾಗಬಹುದು ಎಂಬ ಆತಂಕ ಎದುರಾಗಿದೆ. ಅಕ್ಕಿಯನ್ನೇ ಅವಲಂಬಿಸಿದ ದೇಶಗಳು, ಈ ನಿಷೇಧವನ್ನು ಆದಷ್ಟು ಬೇಗ ತೆಗೆದುಹಾಕಬೇಕು ಎಂದು ಆಗ್ರಹಿಸಿವೆ. ಜಗತ್ತಿನಾದ್ಯಂತ ಮೂರು ಬಿಲಿಯನ್‌ಗೂ ಹೆಚ್ಚು ಜನರು ಅಕ್ಕಿಯನ್ನು ಅವಲಂಬಿಸಿದ್ದಾರೆ. ಜಾಗತಿಕ ಅಕ್ಕಿ ರಫ್ತಿನ ಪೈಕಿ ಶೇ. 40ರಷ್ಟು ರಫ್ತು ಭಾರತದಿಂದಲೇ ಆಗುತ್ತದೆ. ಇತ್ತ, ದೇಶದೊಳಗೆ ಭತ್ತ ಬೆಳೆಯುವ ಪ್ರದೇಶ ಕಿರಿದಾಗುತ್ತಿದೆ.

ಅತ್ತ 2023ನೇ ಸಾಲಿನಲ್ಲಿ ಆಹಾರ ಬಿಕ್ಕಟ್ಟಿನ ಕುರಿತ ಜಾಗತಿಕ ವರದಿಯೊಂದು ಬಿಡುಗಡೆಯಾಗಿದ್ದು, ಆಹಾರದ ಅಭದ್ರತೆಯು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವುದನ್ನು ಸ್ಪಷ್ಟವಾಗಿ ಉಲ್ಲೇಖಿಸಿದೆ. ಆಹಾರ ಮತ್ತು ಜೀವನೋಪಾಯಕ್ಕಾಗಿ ನೆರವನ್ನು ಬಯಸುವವರ ಸಂಖ್ಯೆಯು ಏರುಗತಿಯಲ್ಲಿದೆ. ಜಗತ್ತಿನಲ್ಲಿ 25 ಲಕ್ಷಕ್ಕಿಂತಲೂ ಹೆಚ್ಚು ಜನರು ತೀವ್ರ ಹಸಿವಿನಿಂದ ಬಳಲುತ್ತಿದ್ದಾರೆ. ರಷ್ಯಾ–ಉಕ್ರೇನ್ ಯುದ್ಧದ ದೆಸೆಯಿಂದಾಗಿ ಹಸಿವಿನಿಂದ ಬಳಲುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಹವಾಮಾನ ವೈಪರೀತ್ಯದ ಪರಿಣಾಮಗಳೂ ಆಹಾರದ ಉತ್ಪಾದನೆಯ ಮೇಲೆ ಪರಿಣಾಮ ಬೀರುತ್ತಿದೆ. 2022ರಲ್ಲಿ ಜಗತ್ತಿನ 58 ರಾಷ್ಟ್ರಗಳಲ್ಲಿ ಸುಮಾರು 258 ಮಿಲಿಯನ್ ಜನರು ಆಹಾರದ ಅಭದ್ರತೆ ಎದುರಿಸುತ್ತಿದ್ದರು. ಈ ಸಂಖ್ಯೆ 2021ನೇ ಸಾಲಿನಲ್ಲಿ ಸುಮಾರು 53 ಮಿಲಿಯನ್ ಆಗಿತ್ತು ಎಂದು 'ಫುಡ್ ಸೆಕ್ಯುರಿಟಿ ಇನ್‌ಫರ್ಮೇಶನ್ ನೆಟ್‌ವರ್ಕ್' (FSIN) ಈ ವರದಿಯನ್ನು ಹೇಳುತ್ತದೆ.

ಆಹಾರ ಬೆಳೆಗಳ ಬದಲಿಗೆ ವಾಣಿಜ್ಯ ಬೆಳೆಗಳನ್ನು ಅವಲಂಬಿಸುವ ಪರಿಪಾಟ ರಾಜ್ಯದಲ್ಲಿ ಬಹುತೇಕ ಎಲ್ಲ ಕಡೆಯಲ್ಲಿಯೂ ನಡೆಯುತ್ತಿದೆ. ದಾವಣಗೆರೆ ಜಿಲ್ಲೆಯಲ್ಲಿ ಚೆನ್ನಗಿರಿ ತಾಲ್ಲೂಕು ನಿವಾಸಿ ಆಗಿರುವ ತೇಜಸ್ವಿ ಪಟೇಲ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರೂ ಹೌದು. 'ದಾವಣಗೆರೆ ಜಿಲ್ಲೆಯಲ್ಲಿ ಈ ಬಾರಿ ಮಳೆ ಕೊರತೆಯಾಗಿರುವುದರಿಂದ ರೈತರು ಸಮಸ್ಯೆ ಎದುರಿಸುತ್ತಿರುವುದು ಹೌದು. ಆದರೆ ತಕ್ಷಣಕ್ಕೆ ತಮ್ಮ ಕೃಷಿ ಪದ್ಧತಿಯನ್ನು ಬದಲಾಯಿಸುವುದು ಅವರಿಂದ ಸಾಧ್ಯವಾಗುತ್ತಿಲ್ಲ. ಯಾಕೆಂದರೆ ಈಗಾಗಲೇ ಬೆಲೆ ಇಳಿಕೆ, ಕಾರ್ಮಿಕರ ಕೊರತೆ, ನೀರಾವರಿ ಸಮಸ್ಯೆಯಿಂದ ತತ್ತರಿಸಿರುವ ಅವರಿಗೆ

ರೈತನ ಒಡಲಾಳ

## ಕುರಿಗಳೇ ನಮ್ಮ ಜೀವನಾಧಾರ



ಕೃಷಿಕರ ಬದುಕು ಒಂಥರಾ ಲಾಟರಿ ಇದ್ದಂತೆ. ಬರ ಪರಿಸ್ಥಿತಿಗೆ ಸಿದ್ಧತೆ ಮಾಡಿಕೊಳ್ಳುವುದು, ಬದಲಿ ಬೆಳೆ ಬೆಳೆಯುವುದು – ಇದೆಲ್ಲ ಈ ಬಿಸಿಲಿನ ನಾಡಿನಲ್ಲಿ ಸಾಧ್ಯವಿಲ್ಲದ ಮಾತು. ನಮ್ಮೂರು ಸಂಡೂರು ಬಳಿಯ ಕೃಷ್ಣನಗರ. ಎರಡೂವರೆ ಎಕರೆ ಪ್ರದೇಶದಲ್ಲಿ ಕೃಷಿ ಮಾಡುತ್ತಿದ್ದೇನೆ. ತಾತನ ಕಾಲದಿಂದಲೂ ನಾವು ಕೃಷಿ ಜೀವನವನ್ನೇ ನಡೆಸಿಕೊಂಡು ಬಂದವರು. ಈ ಬಾರಿ ನಮ್ಮ ಜಮೀನಿನಲ್ಲಿ ಆರನೇ ತಿಂಗಳಲ್ಲಿ ಮೆಕ್ಕೆ ಜೋಳ ಬಿತ್ತನೆ ಮಾಡಿದ್ದೆ. ಜುಲೈಯಲ್ಲಿ ಮಳೆಯ ಮೋಡಗಳು ಸ್ವಲ್ಪ ಕಾಣಿಸಿಕೊಂಡವು. ಆದರೆ ಒಳ್ಳೆಯ ಮಳೆ ಬರಲೇ ಇಲ್ಲ. ಬಿತ್ತಿದ ಮೆಕ್ಕೆ ಜೋಳ ಈಗ ಒಣಗಿ ನಿಂತಿದೆ. ಯಾವುದಕ್ಕೂ ಇರಲಿ ಎಂದು ಹತ್ತಿರದಲ್ಲಿರುವ ಜಮೀನನ್ನು ಗುತ್ತಿಗೆ ತೆಗೆದುಕೊಂಡು ಮೆಣಸಿನಕಾಯಿ ಬಿತ್ತನೆ ಮಾಡಿದ್ದೆ. ಆದರೆ ಭಾರೀ ಬಿಸಿಲಿದ್ದಾಗ ಮೆಣಸಿನ ಗಿಡಗಳಿಗೆ ಬೂದುರೋಗ ಬಡಿಯುತ್ತದೆ. ಅದೇನೋ ವೈರಸ್ ಬೇರೆ ಬಂತು. ಒಂದು ಕೊಯ್ಲು ಮಾಡಿದ್ವಿ. ಟೊಳ್ಳು ಮೆಣಸುಗಳಿಗೆ ಬೆಲೆ ಎಲ್ಲಿಂದ ಬರಬೇಕು? ಹೇಗೋ ಪ್ರಯತ್ನಪಟ್ಟು ಎರಡು ಬಾರಿ ಬೋರ್ ಕೊರೆಸಿದ್ದೆವು. 450 ಅಡಿ ಆಳದಲ್ಲಿಯೂ ನೀರಿನ ಪಸೆ ಕಾಣಲಿಲ್ಲ. ಮೆಕ್ಕೆ ಜೋಳದ ಹೊಲದಲ್ಲಿ ಕೊಯ್ಲಿಗೆ ಏನೂ ಇಲ್ಲ. ಒಣ ಗಿಡಗಳನ್ನು ಕಟಾವು ಮಾಡಿ ಮೇವು ಸಂಗ್ರಹ ಮಾಡಿಟ್ಟುಕೊಂಡು ಒಂದಷ್ಟು ಕುರಿಗಳನ್ನು ಸಾಕುತ್ತಿದ್ದೇವೆ ಈಗ. ಈ ಕುರಿಗಳೇ ನಮ್ಮ ಜೀವನಾಧಾರ. ಅಂದಹಾಗೆ, ಜಮೀನಿಗೆ ಗುತ್ತಿಗೆ ಮೊತ್ತ ನೀಡುವುದಕ್ಕೆ ಈ ಕುರಿಗಳೇ ನೆರವಾಗಬೇಕಷ್ಟೆ.

**–ಚಂದ್ರಶೇಖರ ಅರಕೇರಿ,**
ಕೃಷ್ಣನಗರ

